## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **102/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಉಮೇಶ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹದೇವಯ್ಯ | | **15.11.2024** |
| **ವಯಸ್ಸು** | ಃ **30** **ವರ್ಷ** | | |
| **ವೃತ್ತಿ** | ಃ ಗಾರೆ ಕೆಲಸ | **ಪ್ರಾ.ಸಾ.** | ಃ **01** |
| **ವಾಸಸ್ಥಳ** | ಃ ಬಿಳಿಗೆರೆ | **ಚಾ.ಸಾ.** | ಃ **05** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ *4* ವರ್ಷಗಳ ಹಿಂದೆ ಒಂದು ದಿನ ಬಿಳಿಗೆರೆ ಪೋಲೀಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿದ್ದಾರೆ. ಆ ಕಾಲಕ್ಕೆ ನನ್ನನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಈಗ ನಾನು ನೋಡುತ್ತಿರುವ ಪೊಟೊಗಳನ್ನು ನಮ್ಮ ಗ್ರಾಮದ ಬಸವರಾಜು ಇವರ ಶವದ ಬಳಿ ತೆಗೆದಿದ್ದಾರೆ ಆದರೆ ಯಾವ ವಿಚಾರಕ್ಕೆ ಆ ಪೊಟೋ ತೆಗೆದಿದ್ದಾರೆ ಎಂದು ಗೊತ್ತಿಲ್ಲ. ಆ ಪೊಟೋಗಳಲ್ಲಿ ನಾನು ಸಹ ಇದ್ದೇನೆ. ಆ ಬಸವರಾಜು ಇವರ ಶವ ಅವರ ಜಮೀನಿನಲ್ಲೇ ಬಿದ್ದಿತ್ತು. ನಾನು ನೋಡಿದಾಗ ಬಸವರಾಜು ಇವರ ಶವ ಮಲಗಿದ ಸ್ಥಿತಿಯಲ್ಲೇ ಇತ್ತು. ನಾನು ಸಹಿ ಹಾಕಿದಾಗ ಪೋಲೀಸರು ಬಸವರಾಜು ಇವರು ಧರಿಸಿದ್ದ ಬಟ್ಟೆಗಳಲ್ಲಿ ಏನಾದರೂ ಇದ್ದ ಬಗ್ಗೆ ಪರಿಶೀಲನೆ ಮಾಡಿರಲಿಲ್ಲ. ಆ ಕಾಲಕ್ಕೆ ಈಗ ನಾನು ನೋಡುತ್ತಿರುವ ಪತ್ರವನ್ನು ನಾನು ನೋಡಿಲ್ಲ. ಬಸವರಾಜು ಯಾವ ಕಾರಣಕ್ಕೆ ಮರಣಹೊಂದಿದ್ದ ಎಂದು ಗೊತ್ತಿಲ್ಲ. ಆ ಕಾಲಕ್ಕೆ ಬೇರೆ ಯಾರು ಹಾಜರಿದ್ದರು ಮತ್ತು ಪೋಲೀಸರು ಯಾರನ್ನು ವಿಚಾರಣೆ ಮಾಡಿದ್ದರು

ಎಂದು ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಮಹಜರ್ ನಲ್ಲಿನ ಸಹಿ ನಾನು ಪೋಲೀಸ್ ಠಾಣೆಯಲ್ಲಿ ಮಾಡಿದ್ದ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ–*1* ಮತ್ತು ಸಹಿಯನ್ನು ನಿ.ಪಿ–*1(ಎ)* ಎಂದು ಗುರುತಿಸಿದೆ. ಪೊಟೋಗಳನ್ನು ನಿ.ಪಿ–*2* ಮತ್ತು *3* ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ನಮ್ಮ ಗ್ರಾಮದ ಬಸವರಾಜು ಇವರು ಕೊಳಂಗಿ ರಂಗಯ್ಯ ಇವರ ಖಾಲಿ ನಿವೇಶನದಲ್ಲಿರುವ ಹುಣಸೆ ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮರಣಹೊಂದಿದ್ದು ದಿಃ*13.11.2020* ರಂದು ಮದ್ಯಾಹ್ನ *12.40* ರಿಂದ *3.30* ರವರೆಗೆ ಆ ಸ್ಥಳದಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಬಸವರಾಜು ಇವರ ಪ್ಯಾಂಟಿನ ಬಲ ಭಾಗದ ಜೇಬಿನಲ್ಲಿ ಒಂದು ಡೆತ್ ನೋಟ್ ಇತ್ತು ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತರು ತೊಂದರೆ ಕೊಟಿಟದ್ದರಿಂದ ತಾನು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಬಸವರಾಜು ಆ ಡೆತ್ ನೋಟ್ ನಲ್ಲಿ ನಮೂದಿಸಿದ್ದ ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಿಪಿ–*1* ರಂತೆ ಮಹಜರ್ ಮಾಡಿ ಪೊಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆರೋಪಿತರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ**

***ಮರು ವಿಚಾರಣೆಃ- ಇಲ್ಲ.***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು